BKN-02

Sl.No. :

Total No. of Pages : 3

ದ್ವಿತೀಯ ವರ್ಷದ ಬಿ.ಕಾಂ. ಪದವಿ ಪರೀಕ್ಷೆ, ಮೇ/ಜೂನ್- 2025
(SLM Scheme)
ಕನ್ನಡ ಭಾಷೆ (ಪತ್ರಿಕೆ–೨)
ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು
(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು, ವ್ಯಾವಹಾರಿಕ ಕನ್ನಡ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ.*

ವಿಭಾಗ–ಎ

(ಪ್ರಾಚೀನ ಕನ್ನಡ ಕಾವ್ಯ) (20 ಅಂಕಗಳು)

ಪ್ರ1) ಒಂದರ ಭಾವವನ್ನು ಸಂದರ್ಭ ಸಹಿತ ವಿವರಿಸಿ. **[1×5=5]**

೧) ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ!

೨) ಪಟ್ಟದ ಮೊದಲಿಗರು ಆಜಿಗೆ
ಜೆಟ್ಟಿಗರ್, ಅವರೆಂದುಮಾಳ್ವ, ಮುನ್ನಿನ ನೆಲನಂ
ಕೊಟ್ಟು, ಬನಟಿಯಟ್ಟು ನಿನಗೊಡ
ವುಟ್ಟಿದರ್, ಆ ದೊರೆಯರಾಗೆ ತೀರದುದುಂಟೇ

ಪ್ರ2) ಹತ್ತು ಪದಗಳಿಗೆ ಅರ್ಥ ಬರೆಯಿರಿ. **[10×½=5]**

ತುರಗ, ಅಟವಿ, ಪುಸಿ, ಅಲಂಪು, ಅಡಗು, ಬಾಳ್, ಕುರಂಗ, ಕಾದಲ, ಬೆಂತರ, ಅಂಗ, ಭವ, ಅರ್ಕ, ವಸುಮತಿ, ಘಟ.

ಪ್ರ3) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ. **[2×2½=5]**

೧) ನರಸುತ ನಿನ್ನೊರೆಗೆ ದೊರೆಗೆಗಂಡರು ಮೊಳರೆ.

೨) ಬಲವಾದೊಡೆ ರೂಪಿನ ಕೋಟಲೆಯೇವುದೋ.

೩) ಶಿಶುವು ನೀನಲೆ ಮಗನೆ ಕಾದುವರು ಅಸಮಬಲರು.

೪) ನಂದಿ ಮಹಾಕಾಳರಂ ಮರೆವುತಿರೆ ಶಂಕರಂ.

ಪ್ರ4) ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ. **[1×5=5]**

೧) ಅಲ್ಲಮ ಮೃದಂಗವನ್ನು ಹೇಗೆ ನುಡಿಸುತ್ತಿದ್ದನು?

೨) ಜನಪದ ಕಾವ್ಯಗಳ ಮೂಲ ಆಶಯವೇನು?

ವಿಭಾಗ–ಬಿ

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು) (30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಪಂಪನಲ್ಲಿ ಕೃಷ್ಣ ಸಂಧಾನ ಹೇಗೆ ಮೂಡಿಬಂದಿದೆ ವಿವರಿಸಿ.

೨) ಕರ್ಣನ ಇತಿವೃತ್ತವನ್ನು ಬರೆಯಿರಿ.

ಪ್ರ6) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **[2×10=20]**

೧) ಹಳ್ಳಿಯ ಪರಿಸರದಲ್ಲಿ ವೆಂಕಟಶಾಮಿಯ ಪ್ರಣಯ ವಿಫಲಗೊಳ್ಳಲು ಕಾರಣವೇನು? ವಿಮರ್ಶಿಸಿ.

೨) ಭಾರತ ದೇಶದ ರೈತನ ಸಮಸ್ಯೆಗೆ ಚಿಕಿತ್ಸೆಯನ್ನು "ಧನ್ವಂತರಿಯ ಚಿಕಿತ್ಸೆ" ಕಥೆಯಲ್ಲಿ ಕುವೆಂಪುರವರು ಹೇಗೆ ನೀಡಿದ್ದಾರೆ? ವಿವರಿಸಿ.

೩) 'ಮನುವಿನ ರಾಣಿ' ಕಥೆಯ ಆಶಯವೇನು? ವಿಮರ್ಶಾತ್ಮಕವಾಗಿ ನಿರೂಪಿಸಿ.

೪) ಸರ್ಕಾರಿ ಆಸ್ಪತ್ರೆಗಳಲ್ಲಿನ ನೈಜ ಪರಿಸರವನ್ನು 'ಗಾಂಧಿ ಕಥೆ ಹೇಗೆ ಚಿತ್ರಿಸುತ್ತದೆ? ವಿವರಿಸಿ.

ವಿಭಾಗ–ಸಿ

(ವ್ಯಾವಹಾರಿಕ ಕನ್ನಡ) (30 ಅಂಕಗಳು)

ಪ್ರ7) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **[2×10=20]**

೧) ವಾಣಿಜ್ಯ ಕನ್ನಡದ ಸ್ವರೂಪ, ಲಕ್ಷಣ ಮತ್ತು ಮಹತ್ವವನ್ನು ವಿವರಿಸಿ.

೨) ಅನುಗತ ಪತ್ರ ಎಂದರೇನು? ಮಾದರಿ ಪತ್ರ ರಚಿಸಿ.

೩) ಮಾರಾಟ ಪತ್ರದ ಮಹತ್ವವೇನು? ಮಾದರಿ ಪತ್ರದೊಂದಿಗೆ ವಿವರಿಸಿ.

೪) ವಿಮೆ ಎಂದರೇನು? ಎಷ್ಟು ವಿಧ? ವಿಮೆ ಮಾಡಿರುವುದರಿಂದ ದೊರೆಯುವ ಸೌಲಭ್ಯಗಳೇನು? ವಿಶದಪಡಿಸಿ.

ಪ್ರ8) ಎರಡು ವಿಷಯಕ್ಕೆ ಟಿಪ್ಪಣಿ ಬರೆಯಿರಿ. **[2×5=10]**

೧) ವ್ಯವಹಾರೋಜ್ಜೀವನ ಪತ್ರ

೨) ಆದೇಶ ಪತ್ರ

೩) ಉದರಿ ಪತ್ರ

೪) ವಸೂಲಿ ಪತ್ರ

☼ ☼ ☼